## ಶಕ್ತಿರೂಪಿಣಿ ಶಿಕ್ಷಕಿಯರು

ಸೆ. 12ರ ಸಂಚಿಕೆಯಲ್ಲಿ ಸುಮಾ ಬಿ. ಬರೆದಿರುವ 'ಶಕ್ತಿರೂಪಿಣಿ ಶಿಕ್ಷಕಿಯರಿಗೆ ನಮಸ್ಕಾರ' ಸಾಂದರ್ಭಿಕವಾಗಿದೆ. ಲೇಖನದಲ್ಲಿ, ಶಿಕ್ಷಕಿಯರನ್ನೇ ಕುರಿತು ಬರೆದಿದ್ದಾರೆ. ಅದರೊಟ್ಟಿಗೆ ಶಿಕ್ಷಕರ ಕುರಿತೂ ಬರೆಯಬಹುದಿತ್ತು. ಒಟ್ಟಿನಲ್ಲಿ ಶಿಕ್ಷಕರಾಗಲಿ ಅಥವಾ ಶಿಕ್ಷಕಿಯರಾಗಲಿ ಅವರ ಬವಣೆ ಹೇಳತೀರದು. ಸರ್ಕಾರವೂ ಅವರ ಬಗ್ಗೆ ತೋರುತ್ತಿರುವ ಅನಾದರಣೆ ಶೋಚನೀಯ. ಪ್ರಸ್ತುತ ವರ್ಗಾವಣೆಯ ಬಗ್ಗೆ ತೋರುತ್ತಿರುವ ಗೊಂದಲದ ಪರಿಸ್ಥಿತಿಗೆ ಹೆಚ್ಚಿನ ವಿವರಣೆ ಬೇಕಿಲ್ಲ.

—ಎಸ್. ಪ್ರಭಾ, ಬೆಂಗಳೂರು

ಲೇಖನ ಸಕಾಲಿಕ. ಪರಿಸ್ಥಿತಿ ದಶಕಗಳ ಹಿಂದಿನಂತೆ ಖಂಡಿತ ಇಲ್ಲ. ಪಾಠ ಕಲಿಸುವುದರ ಜೊತೆ ಗುಮಾಸ್ತ, ಅಡುಗೆ ಕೊನೆಗೆ ಆಯಾ ಕೆಲಸಗಳನ್ನು ಮಾಡುವ ಒತ್ತಡದಲ್ಲಿ ನಲುಗುವುದು ಖೇದನೀಯ. ಹೀಗಾಗಿ ಗುಣಮಟ್ಟದಲ್ಲಿ ಋಣಾತ್ಮಕ ಪರಿಣಾಮ ಬೀರುವುದೂ ಅಷ್ಟೇ ಸಹಜ. ಶಿಕ್ಷಕರು ಮುಕ್ತ ವಾತಾವರಣದಲ್ಲಿ ವಿದ್ಯೆ ಕಲಿಸುವಂತಾಗಲಿ ಎಂಬುದೇ ನನ್ನ ಆಶಯ.

—ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು

## ಹಿರಿಜೀವ ಎಂಬ ಆಕರಗ್ರಂಥ

ಸೆ.5ರ ಸಂಚಿಕೆಯಲ್ಲಿ ಡಾ. ವಿನಯಾ ಶ್ರೀನಿವಾಸ್ ಬರೆದಿರುವ 'ಹಿರಿಜೀವ ಎಂಬ ಆಕರ ಗ್ರಂಥ' ಲೇಖನ ಚೆನ್ನಾಗಿದೆ. ಆದರೆ, ಸಣ್ಣಕುಟುಂಬಗಳಿಂದ ಬಂದ, ಲೇಖನದಲ್ಲಿ ಹೇಳಲಾದ ವಿಷಯಗಳ ಕುರಿತು ಹೆಚ್ಚೇನೂ ತಿಳಿದಿರದ, ಉದ್ಯೋಗಸ್ಥರಾಗಿದ್ದ ಅಜ್ಜಿಯರ ತಲೆಮಾರೊಂದು ಈಗಾಗಲೇ ತಯಾರಾಗಿದೆ. ಮಗಳ ಹೆರಿಗೆಯ ದಿನದಲ್ಲಿ ಜೊತೆಗಿರಲು ವಿದೇಶಪ್ರಯಾಣ ಮಾಡುವ ಅಮ್ಮಂದಿರ ದಂಡು ದಂಡಯಾತ್ರೆ ಮಾಡುತ್ತಿದೆ. ಮಗಳ ಹೆರಿಗೆಯ ಸಮಯದಲ್ಲಿ ಅನುಭವವಿಲ್ಲದೆ ಪರದಾಡುವ ಸಹೋದ್ಯೋಗಿಗಳನ್ನು ಕಂಡಿದ್ದೇನೆ. ಸ್ವತಃ ನಾನು ಕೂಡ ಈ ಗುಂಪಿಗೆ ಸೇರುವವಳು. ಬದಲಾದ ಸಾಮಾಜಿಕತೆ ಮತ್ತು ಆರ್ಥಿಕತೆಯ ಪರಿಣಾಮಗಳಿವು.

—ರೋಹಿಣಿ

'ಅಜ್ಜಿ ಎಂಬ ಆಕರಗ್ರಂಥ' ಲೇಖನ, ಸ್ವಾರ್ಥದಲ್ಲಿ ಮುಳುಗಿ, ಬಂಡವಾಳಶಾಹಿಯ ಹೊಡೆತದಿಂದ ನಲುಗುತ್ತಿರುವ ಜನಾಂಗಕ್ಕೆ 'ಹಿರಿಯರ' ಮಹತ್ವ ಹೇಳಿದೆ. ಮಕ್ಕಳ ಮನಸ್ಸು ಹೂವಂತೆ ಅರಳಲು, ಬುದ್ಧಿಮತ್ತೆ ಬೆಳೆಯಲು ಪೂರಕವಾಗುವ ಅವರ ಸಾಂಗತ್ಯದ ಪ್ರಾಮುಖ್ಯತೆಯನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದು ಅಭಿನಂದನಾರ್ಹ.

—ಡಾ.ಅಮೀರುದ್ದೀನ್.ಅ.ಖಾಜಿ, ವಿಜಯಪುರ



## ಹಾಯ್ ಮೆಂಟವಯ್

ಸೆ. 5ರ ಸಂಚಿಕೆಯಲ್ಲಿ ಪ್ರಕಟವಾದ ಡಿ.ಜಿ.ಮಲ್ಲಿಕಾರ್ಜುನ ಅವರ 'ಹಾಯ್ ಮೆಂಟವಯ್' ಲೇಖನ ಇಂಡೋನೇಷ್ಯಾದ ಬುಡಕಟ್ಟು ಜನಾಂಗ ಮೆಂಟವಯ್ ಬಗ್ಗೆ ಗೊತ್ತಿಲ್ಲದ ಹಲವು ಸಂಗತಿಗಳನ್ನು ಓದುಗರಿಗೆ ನೀಡಿತು. ಆದರೆ ಆ ಬುಡಕಟ್ಟು ಜನಾಂಗದ ವಿವಾಹ ಪದ್ಧತಿಗಳು ಮೊದಲಾದ ಹಲವು ಸಂಗತಿಗಳನ್ನು ಲೇಖಕರು ಕಲೆಹಾಕಿ ಬರೆಯಬೇಕಿತ್ತೆಂದು ಅನಿಸಿತು. ಉತ್ತಮ ಚಿತ್ರಗಳು ಮನಸೆಳೆಯಿತು.

—ಕೊ. ಸು. ನರಸಿಂಹಮೂರ್ತಿ, ಚಾಮರಾಜಪುರಂ

## ಸಮಂಜಸ ಶೀರ್ಷಿಕೆ

ಆಗಸ್ಟ್ 29ರ ಸಂಚಿಕೆಯಲ್ಲಿ ವಿಶಾಖ ಎನ್. ಬರೆದಿರುವ 'ಹೊಸ ಕಾಲದ ಹಾಸ್ಯವಲ್ಲರಿ' ಲೇಖನ ಚೆನ್ನಾಗಿದೆ. ಅದರಲ್ಲಿಯೂ 'ಲೋಲ್‌ಬಾಗ್‌ನ ನಗೆದಳಗಳು' ಶೀರ್ಷಿಕೆಯೇ ತುಂಬಾ ಸಮಂಜಸವಾಗಿದೆ. ಯಾಕೆ ಗೊತ್ತೆ? LOL ಎಂದರೆ ಲಾಟ್ಸ್ ಆಫ್ ಲಾಫ್!

—ಸಿ.ಎಸ್. ಸುನಂದನ, ಹೈದರಾಬಾದ್

## ಅಬ್ಬಾ ಧೈರ್ಯವೆ!

ಪದ್ಮ ಪೂವಯ್ಯರವರ 'ಕಾಡಿನೊಳಗೊಂದು ಮನೆಯ ಮಾಡಿ' (ಸವಿ ಸವಿ ನೆನಪು, 5 ಸೆಪ್ಟಂಬರ್) ಒಂದು ರೋಮಾಂಚಕಾರಿ ಜೀವನದ ಚಿತ್ರಣ. ಆ ಪರಿಸ್ಥಿತಿಯಲ್ಲಿ ಅವರು ಧೈರ್ಯದಿಂದ ಕುಟುಂಬ ವಾಸ್ತವ್ಯವನ್ನು ನಿಭಾಯಿಸಿಕೊಂಡು ಹೋಗಿದ್ದನ್ನು ಮೆಚ್ಚಲೇಬೇಕು! ಹಿಂದೆ ನನ್ನ ಅಕ್ಕ ಮತ್ತು ಭಾವನವರು ಭೂಗರ್ಭ ಇಲಾಖೆ ಕೆಲಸದಲ್ಲಿ ದಟ್ಟ ಕಾಡಿನ ರೋಣದಲ್ಲಿ ಒಂಬತ್ತು ತಿಂಗಳ ಮಗಳೊಂದಿಗೆ ಡೇರೆ ಜೀವನ ನಡೆಸಿದ್ದು ಜ್ಞಾಪಕಕ್ಕೆ ಬಂತು.

—ಎಸ್. ಆರ್.ದೇವಪ್ರಕಾಶ್, ತುಮಕೂರು

## ಕಥೆ ಎಂದರೆ ಹೀಗಿರಬೇಕು

ಎಂ. ಎಸ್. ಶ್ರೀರಾಮ್ ಅವರ ಸಂಭಾಷಣೆ (ಆಗಸ್ಟ್ 29) ಸರಳವಾಗಿ ಓದಿಸಿಕೊಳ್ಳುತ್ತಲೇ ಮಧ್ಯಮಧ್ಯ ಅರ್ಧ ವಿರಾಮ ಹಾಕಿ ನಿಂತು ಹೋಗುವ ಸ್ಪೀಡ್ ಬ್ರೇಕರ್ ಆಗಿ ಚಿಂತಿಸುವಂತೆ ಮಾಡಿ ಅರ್ಥ ಹೊಳೆದು ಸಂತೋಷವಾಗುತ್ತದೆ. ಮೊದಲ ಓದಿಗೆ ಕತೆಯ ಓಟ ನೇರ ಸರಳ ಎನ್ನಿಸಿದರೂ ನಂತರ ಇದೊಂದು ಚಕ್ರವ್ಯೂಹವಾಗಿ ಓದುಗ ದಾರಿ ಕಾಣದ ಅಭಿಮನ್ಯು ಆಗುತ್ತಾನೆ. ಸೂಯಿಸೈಡ್ ಆಗಬೇಕಾದ ಘಟನೆ ಅಪಘಾತ ಆಗುವುದರಲ್ಲಿ ಕತೆಯ ಸತ್ವ ಅಡಗಿದೆ.

—ಸತ್ಯಬೋಧ, ಬೆಂಗಳೂರು

## ಕನ್ನಡ ಸಿನಿಮಾ ಲಾಟರಿ!

ಸೆಪ್ಟೆಂಬರ್ 5ರ ಸಂಚಿಕೆಯಲ್ಲಿ ರಘುನಾಥ ಚ. ಹ. ಬರೆದಿರುವ 'ಸಿನಿಮಾ ಲಾಟರಿ' ಲೇಖನ ಚೆನ್ನಾಗಿದೆ. ಕನ್ನಡ ಚಿತ್ರರಂಗಕ್ಕೆ ಹಲವಾರು ರಾಷ್ಟ್ರ ಪ್ರಶಸ್ತಿಗಳು ಬಂದಿರುವುದು ಸಂತಸದ ವಿಷಯ. ಆದರೆ ಹೊಸಬರು, ಯುವಕರು ಚಲನಚಿತ್ರಗಳನ್ನು ಮೌಲ್ಯಯುತವಾಗಿ ನಿರ್ಮಿಸಿದರೆ, ಇಂದಿನ ಕನ್ನಡ ಚಿತ್ರಗಳ ವಿತರಣೆ/ಪ್ರದರ್ಶನ ವಲಯದ ಲಾಬಿಯಿಂದ ಅದನ್ನು ನೋಡಿ ಆನಂದಿಸಲು ಪ್ರೇಕ್ಷಕರಿಗೆ ಅವಕಾಶ ಇಲ್ಲದಂತಾಗಿದೆ. ಕರ್ನಾಟಕ ರಾಜ್ಯ ಸರ್ಕಾರ ಸಹಾಯಧನ ಯೋಜನೆ/ಪ್ರಶಸ್ತಿ ಪುರಸ್ಕಾರದ ಪ್ರೋತ್ಸಾಹ ತಂದದ್ದು ಅವರ ದೃಷ್ಟಿಯಲ್ಲಿ ಕನ್ನಡ ಚಿತ್ರಗಳಿಗೆ ಒಂದು ನಿಶ್ಚಿತ ಆದಾಯದ ಭರವಸೆ ನೀಡುವುದಾಗಿತ್ತು. ಇದರಿಂದ ಕಡಿಮೆ ಬಜೆಟ್‌ನಲ್ಲಿ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸುವವರಿಗೆ ಒಂದು ಆಶಾಕಿರಣ ಸಿಕ್ಕಂತಾಯಿತು. ಕನ್ನಡ ಚಿತ್ರರಂಗದ ಅತಿರಥ ಮಹಾರಥರು ತಮ್ಮ ಸಂಭಾವನೆ ಹೆಚ್ಚಿಸಿಕೊಳ್ಳಲು ಇದನ್ನೂ ಒಂದು ಮಾನದಂಡವಾಗಿ ಬಳಸಿಕೊಂಡರು. ಕೆಲವು ನಿರ್ಮಾಪಕರು ಕರ್ನಾಟಕದಲ್ಲಿ ಸಿಗುವ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಂಡರೂ ತಮ್ಮ ಚಿತ್ರದ ನಾಯಕಿಯರನ್ನು ಬೇರೆ ಬೇರೆ ಭಾಷೆಗಳಿಂದ ಕರೆತರುವುದಕ್ಕೆ ಪ್ರಾರಂಭಿಸಿದರು. ಇದಕ್ಕೆ ಆಯಾ ಕಾಲಕ್ಕೆ ಸೂಪರ್ ಸ್ಟಾರ್ ಆಗಿ ಮೆರೆದ ಎಲ್ಲ ನಾಯಕರ ಕುಮ್ಮಕ್ಕೂ ಇತ್ತು. ಇದರಿಂದ ಕನ್ನಡ ಚಿತ್ರಗಳ ಗುಣಮಟ್ಟಕ್ಕೆ ಹೆಚ್ಚಿನ ಕೊಡುಗೆ ಏನೂ ಸಿಗಲಿಲ್ಲ.

—ಬಿ.ಕೆ. ಮಂಜುನಾಥ್, ಬೆಂಗಳೂರು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in